ಶ್ರೀ ಬಿ.ಎಸ್.ಯಡಿಯೂರಪ್ಪ: ಈಗಾಗಲೇ ನಮ್ಮ ನೇಕಾರರು, ನೇಯ್ದ ಬಟ್ಟೆಗಳಿಗೆ ಎಲ್ಲಿಯೂ ಮಾರ್ಕೆಟ್ ಇಲ್ಲದೇ ನೇಕಾರರ ವೃತ್ತಿಯನ್ನೇ ಕೈಬಿಟ್ಟು ಬೀದಿ ಪಾಲಾಗುತ್ತಿದ್ದಾರೆ. ಆದ್ದರಿಂದ, ಇಲ್ಲಿ ಅಷ್ಟು ಒಳ್ಳೆಯ ಬಟ್ಟೆ ತಯಾರು ಮಾಡಬೇಕಾದರೆ, ಅದಕ್ಕೆ ನೀವು ಆದ್ಯತೆ ಕೊಡಿ.

ಅಧ್ಯಕ್ಷರು: ಇದು ಒಳ್ಳೆಯ ಪ್ರಶ್ನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಹೊರಗಡೆಯಿಂದ ತರಿಸುವಂಥ ವ್ಯವಸ್ಥೆ ಇದ್ದರೆ, ಅದನ್ನು ನಿಲ್ಲಿಸುತ್ತೇವೆ.

ಗದಗ ಬೆಟಗೇರಿ ನಗರದಲ್ಲಿ ಕುಡಿಯುವ ನೀರಿನ ಸರಬರಾಜು

43 (11)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ್ ಬೆಟಗೇರಿ ನಗರ ನೀರು ಸರಬರಾಜನ್ನು ವ್ಯವಸ್ಥಿತಗೊಳಿಸಲು ಇನ್ನೂ ಹಲವಾರು ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲು ಹಾಗೂ ಈಗಿರುವ ವಿತರಣಾ ಪೈಪಲೈನ್‌ಗಳನ್ನು ಬದಲಾವಣೆ ಮಾಡುವ ಪ್ರಸ್ತಾವನೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಮುಂದೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರಸ್ತಾವನೆಯನ್ನು ಮಂಜೂರು ಮಾಡಲು ಮಂಡಲಿಯು ತೆಗೆದುಕೊಂಡಿರುವ ಕ್ರಮಗಳೇನು?

ಇ) ಇದನ್ನು ಇದೇ ಆರ್ಥಿಕ ವರ್ಷದಲ್ಲಿ ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳುವರೇ?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಈ ನಗರಗಳಲ್ಲಿ ಹಾಲಿ ವಿತರಣಾ ಜಾಲದ ಬದಲಾವಣೆ ಮಾಡಲು ಮತ್ತು ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲು, ಸರ್ವೆ ಕಲಸವನ್ನು ಈಗಾಗಲೇ ಮಾಡಲಾಗಿದೆ. ಈಗ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲಾಗುವುದು.

ಇ) ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಹೊರಗಿನ ಸಂಸ್ಥೆಗಳಿಂದ ಆರ್ಥಿಕ ಸಹಾಯ ಪಡೆದು 1998-99ರಲ್ಲಿ ಕೈಗೆತ್ತಿಕೊಳ್ಳಲು

ಪರಿಶೀಲಿಸಲಾಗುವುದು.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾವು ಹೋದ ಬಜೆಟ್ ಮಂಡನೆ ಸಂದರ್ಭದಲ್ಲಿ ಮಾತನಾಡಿದಾಗ, ಯಾರು ಯಾರು ಕುಡಿಯುವ ನೀರಿನ ಸಮಸ್ಯೆಯನ್ನು ಎತ್ತಿದ್ದಾರೆ ಅವರೆಲ್ಲರಿಗೂ ನಗರಾಭಿವೃದ್ಧಿ ಸಚಿವರು ಒಂದು ವಿಶೇಷ ಸಭೆಯನ್ನು ಕರೆದು ಅಲ್ಲಿಯೇ ಅವರ ಸಮಸ್ಯೆಗಳನ್ನು ಬಗೆಹರಿಸಲಿ ಎಂದು ತಾವು ಸೂಚನೆ ಕೊಟ್ಟಿದ್ದಿರಿ. ಆ ಪ್ರಕಾರ ಗೌಡರು ನಮ್ಮ ಮೀಟಿಂಗ್ ಕರೆದಿದ್ದರು. ಆಗ ಹೇಳಿದ್ದರು, ಗದಗಿಗೆ ಕುಡಿಯುವ ನೀರು ಪ್ರತಿನಿತ್ಯ 30-35 ಲಕ್ಷ ಗ್ಯಾಲನ್ ನೀರು ಸಿಗುತ್ತಿದ್ದರೂ ಸಹಿತ ಜನರಿಗೆ ಪ್ರತಿನಿತ್ಯ ಕುಡಿಯುವ ನೀರು ಕೊಡುವುದು ಸಾಧ್ಯವಾಗಿಲ್ಲ. 3 ದಿವಸಕ್ಕೊಮ್ಮೆ, 4 ದಿವಸಕ್ಕೊಮ್ಮೆ ಕೊಡುತ್ತಾರೆ. ಒಮ್ಮೊಮ್ಮೆ ಎಲೆಕ್ಟ್ರಿಸಿಟಿ ಅಥವಾ ಪೈಪುಗಳ ತೊಂದರೆಯಾಯಿತು ಎಂದರೆ 10-12 ದಿವಸಕ್ಕೊಮ್ಮೆ ಸಹಿತ ಕೊಡುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಈಗಿರುವಂಥ ವಿತರಣಾ ವ್ಯವಸ್ಥೆ ಏನಿದೆ, ಅದನ್ನು ರೀವ್ಯಾಂಪ್ ಮಾಡಬೇಕು. ಮತ್ತು 7-8 ಓವರ್-ಹೆಡ್ ಟ್ಯಾಂಕ್‌ಗಳನ್ನು ಕಟ್ಟಿಸತಕ್ಕ ಪ್ರಸ್ತಾವನೆಯನ್ನು ನಾವು ಸರ್ಕಾರಕ್ಕೆ ಕೊಟ್ಟಿದ್ದೆವು. ಸರ್ಕಾರದವರು ಅದನ್ನು ಸರ್ವೆ ಮಾಡಿಸಿ, ಮಾಡುತ್ತೇವೆಂಬ ಭರವಸೆಯನ್ನು ಹೋದ ಬಜೆಟ್ ಸಮಯದಲ್ಲಿ ಗೌಡರು ಕೊಟ್ಟಿದ್ದರು. ಇಲ್ಲಿಯವರೆಗೂ ಆ ಭರವಸೆ ಈಡೇರಿಲ್ಲ. ಈಗ ನನಗೆ ಕೊಟ್ಟಂಥ ಉತ್ತರದೊಳಗೆ ಸರ್ವೆ ಮಾಡಿಸುತ್ತಾ ಇದ್ದೇವೆ, ಅದು ಬಂದ ಕೂಡಲೇ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳಲಾಗುವುದು, ಮುಂದಿನ ವರ್ಷ ಇದನ್ನು ಕಾರ್ಯಗತಗೊಳಿಸುವುದಕ್ಕೆ ಪರಿಶೀಲಿಸಲಾಗುವುದೆಂದು ಹೇಳಿದ್ದಾರೆ. ಅದಕ್ಕೆ ದಯವಿಟ್ಟು, ಈ ಶಬ್ದ ಬದಲಿ ಮಾಡಿಬಿಟ್ಟರೆ ಸಾಕು. 1998-99ರಲ್ಲಿ ಈ ಯೋಜನೆಯನ್ನು ಪೂರ್ತಿಗೊಳಿಸಲು ಕ್ರಮ ಕೈಗೊಳ್ಳುತ್ತೇವೆಂಬ ಭರವಸೆ ತಮ್ಮಿಂದ ಬಂದರೆ ನಮಗೆ ಸಂತೋಷವಾಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿ ಬೇಕಾದಷ್ಟು ನೀರು ಇದೆ. ನೀರಿನ ವಿತರಣಾ ವ್ಯವಸ್ಥೆಯಲ್ಲಿ ಲೋಪ ಇದೆ. ಡಿಸ್ಟ್ರಿಬ್ಯೂಷನ್ ಸಿಸ್ಟಂ ಮತ್ತು ಹಳೆಯ ಡಿಸ್ಟ್ರಿಬ್ಯೂಷನ್ ಸಿಸ್ಟಂನ್ನು ಬದಲಾಯಿಸಿ ಮಾಡುವಂಥ ವ್ಯವಸ್ಥೆ ಮತ್ತು ಓವರ್-ಹೆಡ್ ಟ್ಯಾಂಕ್ಸ್ ಕಟ್ಟಿಸುವಂತಾದ್ದು. ಅದಕ್ಕೆ ಈಗಾಗಲೇ ಸರ್ವೆ ಕಾರ್ಯ ಮುಗಿದು, ಎಷ್ಟು ಹಣ ಬೇಕೆಂಬುದರ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಇದರಲ್ಲಿ ಈಗಾಗಲೇ ಸಾಕಷ್ಟು ಯೋಜನೆಗಳು, 1998-99 ಮತ್ತು ಆನ್‌ಗೋಯಿಂಗ್ ಸ್ಕೀಮ್ಸ್ ಮತ್ತು 1999 ಹಾಗೂ 2,000 ವರ್ಷಕ್ಕೂ ಆಗುವಂಥಾದ್ದರ ಬಗ್ಗೆ ಸಾಕಷ್ಟು ಸದಸ್ಯರ ಒತ್ತಡ ಇದೆ. ಅದಕ್ಕೆ ನಾವು ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ ಹೊಂದಾಣಿಕೆ ಮಾಡಿಕೊಂಡು ತಾತ್ವಿಕ ಒಪ್ಪಿಗೆ ಮತ್ತು ತಾಂತ್ರಿಕ ಒಪ್ಪಿಗೆ ಈ ಎರಡೂ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತ

ನಂತರ ಹೊರಗಿನ ಸಂಸ್ಥೆಗಳಿಂದ ಆರ್ಥಿಕ ಸಹಾಯ ಪಡೆದು 1998-99ರಲ್ಲಿ ಈ ಯೋಜನೆಯನ್ನು ಅಂದರೆ, ವಿತರಣಾ ವ್ಯವಸ್ಥೆಯನ್ನು, ಗದಗ್‌ಗೆ ಆಗಬೇಕಾಗಿರುವುದನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಡಿ.ಆರ್.ಪಾಟೀಲ್: ಪೂರ್ತಿಗೊಳಿಸಲಾಗುವುದು ಎಂದು ಹೇಳಿ.

ಶ್ರೀ ಬಿ.ಎನ್.ಬಚ್ಚೇಗೌಡ: ಆಯಿತು, ಪೂರ್ತಿಗೊಳಿಸಲಾಗುವುದು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ವಿಶೇಷ ಘಟಕ ಯೋಜನೆಗೆ ನೀಡಿರುವ ಸಹಾಯಧನ

44 (166)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಜನವರಿವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ವಿಶೇಷ ಘಟಕ ಯೋಜನೆಯಲ್ಲಿ ಬಿಡುಗಡೆಯಾಗಿರುವ ಸಹಾಯಧನವೆಷ್ಟು?

ಆ) ಸದರಿ ಸಹಾಯಧನವನ್ನು ಎಷ್ಟು ಫಲಾನುಭವಿಗಳಿಗೆ ನೀಡಲಾಗಿದೆ ನೀಡಲಾಗದಿದ್ದಲ್ಲಿ ಕಾರಣಗಳೇನು? (ವಿವರ ನೀಡುವುದು)

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) 1997-98ನೇ ಜನವರಿವರೆಗೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಿಗೆ ವಿಶೇಷ ಘಟಕ ಯೋಜನೆಯಡಿ ಈ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

ಯೋಜನೆಯ ಹೆಸರು	ದಕ್ಷಿಣಕನ್ನಡ	ಉಡುಪಿಜಿಲ್ಲೆ
		(ರೂ.ಲಕ್ಷಗಳಲ್ಲಿ)
ವಿಶೇಷ ಘಟಕ ಯೋಜನೆ ರಾಜ್ಯ ಯೋಜನೆ	75.07	104.04
ವಿಶೇಷ ಕೇಂದ್ರೀಯ ಸಹಾಯಧನ	11.88	8.17
ಒಟ್ಟು	86.95	112.21